ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಸ್ಪೇಷಲ್ ಕೇಸ್ **:475/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸೈಯದ್ ಸೊಯೇಬ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಸೈಯದ್ ಇಲಿಯಾಸ್ | **10.01.2024** |
| ವಯಸ್ಸು | : | 24 ವರ್ಷ | |
| ವೃತ್ತಿ | : | ಹಣ್ಣಿನ ವ್ಯಾಪಾರ | ಪಿ.ಡಬ್ಲೂ: 3 |
| ವಾಸಸ್ಥಳ | : | ಮಂಡಿಮೊಹಲ್ಲಾ , ಮೈಸೂರು | ಸಿ.ಡಬ್ಲೂ: 3 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ. ಫ್ರಾಸಾ 2 ನನ್ನ ದೊಡ್ಡಪ್ಪ. ಚಾಸಾ– 18 ರವರ ಪರಿಚಯ ಇಲ್ಲ . ಈಗ 3 ವರ್ಷಗಳ ಹಿಂದೆ ಸಿಸಿಬಿ ಠಾಣೆಗೆ ಲಾರಿ ಬಿಡಿಸಿಕೊಳ್ಳಲು ನಾನು ಹೋದಾಗ ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಈಗ ನನಗೆ ತೋರಿಸಿದ ನಿಪಿ. 3 ನೋಟೀಸ್ ನ ಮೇಲೆ ನನ್ನ ಸಹಿ ಇದೆ ಸಾಕ್ಷಿಯ ಸಹಿಯನ್ನು ನಿಪಿ.– 3 (ಬಿ) ಎಂದು ಗುರುತಿಸಲಾಯಿತು. ನಿಪಿ. 3 ರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನೊಂದಿಗೆ ನಿಪಿ. 3 ಕ್ಕೆ ಫ್ರಾಸಾ 2 ರವರು ಸಹಿ ಮಾಡಿದ್ದಾರೆ. ನಿಪಿ. 2 ರ ಮೇಲಿರುವ ಸಹಿ ನನ್ನದೆ ಆಗಿದೆ. ಸಾಕ್ಷಿಯ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ನಿಪಿ. 2 ರಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇಲ್ಲ. ಆ ಎರಡೂ ಸಹಿಗಳನ್ನು ನಾನು ಠಾಣೆಯಲ್ಲಿಯೇ ಮಾಡಿದ್ದೇನೆ. ಯಾವ ದಿನಾಂಕದಂದು ಹಾಗೂ ಯಾವ ಸಮಯದಲ್ಲಿ ಆ ಸಹಿಗಳನ್ನು ಮಾಡಿದ್ದೇನೆ ಎಂದು ನೆನಪಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಆ ದಿನ ಜಪ್ತು ಮಾಡಿಕೊಂಡಿಲ್ಲ. ಮು. ಮಾ. 1 ಕ್ಕೆ ಹಚ್ಚಿದ ಚೀಟಿಯ ಮೇಲೆ ನನ್ನ ಸಹಿ ಇದೆ. ಮು. ಮಾ. 1 ನ್ನು ಪೊಲೀಸರು ಯಾವಾಗ ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ

ಮೊದಲು ನಾನು ಆರೋಪಿತರನ್ನು ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2. ದಿಃ 02.10.2020 ರಂದು ಚಾಸಾ-18 ರವರು ನನಗೂ ಹಾಗೂ ಫ್ರಾಸಾ 2 ರವರನ್ನು ಬರಮಾಡಿಕೊಂಡರು ಎಂದರೆ ನಿಜ. ಚಾಸಾ- 18 ರವರು ತಮಗೆ 1 ನೇ ಆರೋಪಿಯ ಅಂಗಡಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ತಿಳಿಸಿ ನಿಪಿ. 3 ನೋಟೀಸ್ ಕೊಟ್ಟರು ಎಂದರೆ ಸರಿಯಲ್ಲ. ಚಾಸಾ- 18 ರವರು ಫ್ರಾಸಾ 1 , ನನ್ನನ್ನು ಹಾಗೂ ಫ್ರಾಸಾ 2 ಚಾಸಾ, 12, 13,14 ರವರನ್ನು ಕರೆದುಕೊಂಡು ದಾಳಿಗೆ ಬೇಕಾಗುವ ಪರಿಕರಗಳೊಂದಿಗೆ ಇಲಾಖಾ ವಾಹನದಲ್ಲಿ ಮಧ್ಯಾಹ್ನ 12 ಗಂಟೆಗೆ ಸ್ಥಳಕ್ಕೆ ಹೋದರು ಎಂದರೆ ಸರಿಯಲ್ಲ.

3. ನಾವು ಸ್ಥಳಕ್ಕೆ ಹೋದಾಗ ಅಂಗಡಿಯಲ್ಲಿ 1 ನೇ ಆರೋಪಿ ಇದ್ದ ಎಂದರೆ ಸರಿಯಲ್ಲ. ಪೊಲೀಸರು ಹತ್ತಿರ ಹೋಗುತ್ತಿದ್ದಂತೆ ಆ ವ್ಯಕ್ತಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಪೊಲೀಸರು ಸುತ್ತುವರೆದು ಅವನನ್ನು ವಶಕ್ಕೆ ಪಡೆದರು ಎಂದರೆ ಗೊತ್ತಿಲ್ಲ. ನನ್ನ ಹಾಗೂ ಫ್ರಾಸಾ 2 ರವರ ಸಮಕ್ಷಮದಲ್ಲಿ ಅವರು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಅಂಗಡಿಯ ಒಳಗೆ ಹೋಗಿ ಪರೀಕ್ಷಿಸಲಾಗಿ ಅಂಗಡಿಯ ಸಜ್ಜಾದ ಮೇಲೆ ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರ್

ಇತ್ತು , ಅದರಲ್ಲಿ ಗಾಂಜಾ ಅಂದರೆ ಹೂವು , ಕಾಂಡ , ಬೀಜ, ಸೊಪ್ಪಿನಿಂದ ಕೂಡಿದ್ದಾಗಿತ್ತು ಎಂದರೆ ಸರಿಯಲ್ಲ. ಗಾಂಜಾ ಎಂದು ಖಚಿತಪಡಿಸಿಕೊಂಡ ನಂತರ ನಮ್ಮ ಸಮಕ್ಷಮ ಚಾಸಾ– 18 ರವರು ತೂಕ ಮಾಡಲಾಗಿ 1 ಕೆಜಿ 983 ಗ್ರಾಂ ಇತ್ತು ಎಂದರೆ ಸರಿಯಲ್ಲ. ದೊರೆತ ಗಾಂಜಾವನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲೆ ಎ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ನಾವು ಹಾಗೂ ಚಾಸಾ– 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ.

4. ಚಾಸಾ– 18 ರವರ ಆದೇಶದ ಮೆರೆಗೆ ನ್ಯಾಯಾಲಯ ಮುಂದಿರುವ 1 ನೇ ಆರೋಪಿ ತನ್ನ ಜೇಬಿನಿಂದ ರೂ. 2,200/– ಹೊರಗೆ ಇಟ್ಟ ಎಂದರೆ ಸರಿಯಲ್ಲ. ಅದನ್ನು ತನಿಖಾಧಿಕಾರಿ ಪ್ಲಾಸ್ಟಿಕ್ ಕವರ್ ಗೆ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ನಮ್ಮ ಹಾಗೂ ಚಾಸಾ– 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ.

5. 1 ನೇ ಆರೋಪಿಗೆ ಗಾಂಜಾದ ಬಗ್ಗೆ ವಿಚಾರಿಸಲಾಗಿ 2 ಮತ್ತು 3 ನೇ ಆರೋಪಿತರಿಂದ ಗಾಂಜಾ ತೆಗೆದುಕೊಂಡು ಮಾರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. 1 ನೇ ಆರೋಪಿ 2 ಮತ್ತು 3 ನೇ ಆರೋಪಿತರ ಮನೆಯನ್ನು ತೋರಿಸುವುದಾಗಿ ಹಾಗೂ ಅವರ ಮನೆಯಲ್ಲಿ ಗಾಂಜಾವನ್ನು ಸೇಖರಿಸಿರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. ಆ ಪ್ರಕಾರ 1 ನೇ ಆರೋಪಿ ತೋರಿಸಿದ ಮಾರ್ಗದಲ್ಲಿ ಅಧಿಕಾರಿಗಳು ಸರ್ಕಾರಿ ವಾಹನದಲ್ಲಿ , ನಮ್ಮೆಲ್ಲರನ್ನು ರಾಜೀವನಗರದ , 2 ನೇ ಹಂತ , ಮನೆ ನಂ. 2100 ಹತ್ತಿರ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಒಳಗೆ ಹೋಗಿ 1 ನೇ ಆರೋಪಿ ಸೋಪಾದ ಮೇಲೆ ಕುಳಿತಂತಹ ಇಬ್ಬರು ವ್ಯಕ್ತಿಗಳನ್ನು 2 ಮತ್ತು 3 ನೇ ಆರೋಪಿತರು ಎಂದು ಹೇಳಿದ ಎಂದರೆ ಸರಿಯಲ್ಲ.

ಅವರು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರಾಗಿದ್ದಾರೆ ಎಂದರೆ ಗೊತ್ತಿಲ್ಲ. ಚಾಸಾ– 18 ರವರು 2 ಮತ್ತು 3 ನೇ ಆರೋಪಿತರನ್ನು ವಶಕ್ಕೆ ಪಡೆದು ಮನೆಯನ್ನು ಪರಿಶೀಲಿಸುವಂತೆ ತಿಳಿಸಿದರು ಎಂದರೆ ಸರಿಯಲ್ಲ. ಆ ಮನೆಯಲ್ಲಿ 2 ಕೋಣೆಗಳು ಇದ್ದು, ಒಂದು ಕೋಣೆಯ ಸಜ್ಜಾದ ಮೇಲೆ ಜುವಾರಿ ಚೀಲದಲ್ಲಿ ಕಟ್ಟಿರುವ ಒಂದು ಬಂಡಲ್ ಇದ್ದು , ಅದನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇತ್ತು ಎಂದರೆ ಸರಿಯಲ್ಲ. ಚಾಸಾ– 18 ರವರು ಅದನ್ನು ಪಂಚರ ಸಮಕ್ಷಮ ತೂಕ ಮಾಡಲಾಗಿ ಅದು 3 ಕೆಜಿ 105 ಗ್ರಾಂ ಇತ್ತು ಎಂದರೆ ಸರಿಯಲ್ಲ. ಅದೇ ಸಜ್ಜಾದ ಮೇಲೆ ದಿನಪತ್ರಿಕೆಯಲ್ಲಿ ಸುತ್ತಿದ ಇನ್ನೊಂದು ಬಂಡಲ್ ಇದ್ದು ಅದನ್ನು ನೋಡಲಾಗಿ ಅದರಲ್ಲಿಯೂ ಸಹ ಗಾಂಜಾ ಇದ್ದದ್ದು ಕಂಡು ಬಂತು ಎಂದರೆ ಸರಿಯಲ್ಲ. ಚಾಸಾ– 18 ರವರು ಅದನ್ನು ನಮ್ಮ ಸಮಕ್ಷಮ ತೂಕ ಮಾಡಲಾಗಿ ಅದು 5 ಕೆಜಿ 44 ಗ್ರಾಂ ಇತ್ತು ಎಂದರೆ ಸರಿಯಲ್ಲ. ಅವೆಲ್ಲವುಗಳನ್ನು ಬಿಳಿ ಬಟ್ಟೆಯಲ್ಲಿ ಹೊಲೆದು ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಚಾಸಾ– 18 ರವರು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಜುವಾರಿ ಸಿಮೆಂಟ್ ಚೀಲ್ ವನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. .

6. ಮಧ್ಯಾಹ್ನ 2.15 ರಿಂದ 4.45 ಗಂಟೆಯವರೆಗೆ ಪಂಚನಾಮೆ ಮಾಡಿ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಯಿತು ಎಂದರೆ ಸರಿಯಲ್ಲ.

7.ಆ ದಿನ 500 ರೂ ಮುಖಬೆಲೆಯ 3 ನೋಟುಗಳು , 200 ರೂ ಮುಖಬೆಲೆಯ 2, 100 ರೂ ಮುಖಬೆಲೆಯ 3 ನೋಟುಗಳನ್ನು 1 ನೇ ಆರೋಪಿ ಹಾಜರುಪಡಿಸಿದ್ದ ಎಂದರೆ ಸರಿಯಲ್ಲ.

8. ಚಾಸಾ– 18 ರವರು ನಮ್ಮೆಲ್ಲರೊಂದಿಗೆ ವಶಕ್ಕೆ ಪಡೆದ 3 ಜನ

ಆರೋಪಿತರೊಂದಿಗೆ ಹಾಗೂ ಜಫ್ತಾದ ವಸ್ತುಗಳೊಂದಿಗೆ ಠಾಣೆಗೆ ಬಂದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಈಗ ನನಗೆ ಓದಿ ಹೇಳಿದಂತೆ ನಿಪಿ. 6 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕರೆದಾಗ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತೇನೆ ಮುಚ್ಚಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಮುಚ್ಚಳಿಕೆ ಪತ್ರವನ್ನು ನಿಪಿ.– 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.–7 (ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

10.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.